

ಕರ್ಕಿ ಕೃಷ್ಣಮೂರ್ತಿ

# ಪ್ಯಾಶನ್

ಕಲೆ ಹುಟ್ಟಿನಿಂದ ಬಂದಿರುವುದಿಲ್ಲ. ಶ್ರದ್ಧೆ, ಸತತ ಶ್ರಮ ಹಾಗೂ ತರಬೇತಿಯಿಂದ ಯಾವ ಮಗುವೂ ಯಾವ ಕಲೆಯನ್ನೂ ತನ್ನದಾಗಿಸಿಕೊಳ್ಳಬಹುದು ಎನ್ನುವುದನ್ನು ಸಾಧಿಸಿ ತೋರಿಸಲು ಪ್ರಯತ್ನಿಸಿದವ ಶಿಕ್ಷಣ ತಜ್ಞ ಲಾಸ್ಲೋ ಪೊಲ್ಗರ್.

ಅಮೆರಿಕದಲ್ಲಿ ನೆಲೆಸಿರುವ ನನ್ನ ಕಾಲೇಜು ಮಿತ್ರನೊಬ್ಬ ಹಲವು ವರ್ಷಗಳ ನಂತರ ಫೋನ್ ಮಾಡಿದ್ದ. ಹೀಗೆ ಅದು ಇದು ಮಾತುಕತೆಗಳ ನಡುವೆ ಮಕ್ಕಳ ವಿಷಯವೂ ಬಂತು. ನನ್ನ ಮಗಳೂ ಆತನ ಮಗಳೂ ಹೆಚ್ಚುಕಮ್ಮಿ ಒಂದೇ ವಯಸ್ಸು. ಹೈಸ್ಕೂಲ್ ಓದುತ್ತಿದ್ದಾರೆ.

“ಯಾವುದರಲ್ಲಿ ಆಸಕ್ತಿ ನಿನ್ನ ಮಗಳಿಗೆ?” ಆತ ಕೇಳಿದ.

“ಎಲ್ಲದರಲ್ಲೂ ಇದೆ. ಓದುವುದೊಂದು ಬಿಟ್ಟು” ನಾನು ಹೇಳಿದೆ.

“ಅಲ್ಲ, ಹಾಗಲ್ಲ. ಯಾವುದರಲ್ಲಿ ಹೆಚ್ಚು ಆಸಕ್ತಿ ತೋರುತ್ತಾಳೆ? ಐ ಮೀನ್ ವಾಟ್ ಈಸ್ ಹರ್ ಪ್ಯಾಶನ್ (PASSION)?”

“ಯಾವುದರಲ್ಲಿ ಆಕೆಗೆ ವಿಶೇಷ ಆಸಕ್ತಿ ಅಂತಾ ಗೊತ್ತಾಗ್ತಾ ಇಲ್ಲ ಮಾರಾಯಾ. ಹಾಗೆ ನೋಡಿದ್ರೆ ಆಟ ಆಡೋದೆ ಅವಳಿಗೆ ಎಲ್ಲಕ್ಕಿಂತ ಹೆಚ್ಚು ಪ್ರಿಯ.”

“ಓಹ್... ಯಾವುದೂ ಸೂಚನೆ ಕೊಡ್ತಾ ಇಲ್ಲ ಅನ್ಸತ್ತೆ. ನನ್ನ ಮಗಳೂ ಹಾಗೇ. ಆದರೆ, ಅದನ್ನು ಕಂಡು ಹಿಡಿಯಲು ಒಂದು ಚೆಕ್‌ಲಿಸ್ಟ್ ಇದೆ. ಇಲ್ಲಿಯ ಸಾಕಷ್ಟು ತಜ್ಞರು ಸೇರಿ ತಯಾರಿಸಿದ್ದು. ಅದರ ಪ್ರಕಾರ ನಾನು ಮಗಳನ್ನು ಗಮನಿಸತೊಡಗಿದ ಮೇಲೆ, ಸ್ವಲ್ಪ ಸ್ವಲ್ಪ ಕುರುಹು ಸಿಗುತ್ತಿದೆ. ನಿನಗೆ ಬೇಕಾದರೆ ಆ ಚೆಕ್‌ಲಿಸ್ಟ್ ಕಳಿಸಿ ಕೊಡುವೆ.”

“ಅದರಿಂದ ಅಂತಾ ಏನು ಉಪಯೋಗ ಇದೆ ಮಾರಾಯಾ?”

“ಮಗಳಿಗೆ ಯಾವುದು ಇಷ್ಟ ಅನ್ನೋದನ್ನ ಕಂಡುಹಿಡಿಯ ಬೇಕಲ್ಲವಾ? ಅವಳು ಅದೇ ಕ್ಷೇತ್ರದಲ್ಲಿ ತನ್ನ ಕೆರಿಯರ್ ರೂಪಿಸಿಕೊಳ್ಳೋದು ಮುಖ್ಯ ಅಲ್ವಾ. ತಮ್ಮ ಪ್ಯಾಶನ್ ಏನನ್ನೋದು ಅವರಿಗೇ ಗೊತ್ತಾಗಬೇಕು. ಗೊತ್ತಾಗಲಿಲ್ಲ ಅಂದ್ರೆ, ಈ ಚೆಕ್‌ಲಿಸ್ಟ್ ಅದನ್ನು ಕಂಡುಹಿಡಿಯಲು ಸಹಾಯ ಮಾಡುತ್ತೆ.”

“ನಮ್ಮ ಕಾಲೇಜಿನ ಕೊನೇ ವರ್ಷದ ಬೀಳ್ಕೊಡುಗೆ ಸಮಾರಂಭದಲ್ಲಿ, ಎಚ್.ಓ.ಡಿ ಮಾಡಿದ ಭಾಷಣ ನೀನು ಸೀರಿಯಸ್ಸಾಗಿ ತಗೊಂಡ ಹಾಗಿದೆ ಮಾರಾಯ. ‘ಫಾಲೋ ಯುವರ್ ಪ್ಯಾಶನ್’